ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತಮೂರನೆಯ ಅಧಿವೇಶನ
ಸೋಮವಾರ, ದಿನಾಂಕ : 01 ನೇ ಫೆಬ್ರವರಿ, 2021

ಸಾಮಾಜಿಕ ಅರಣ್ಯ ಪ್ರದೇಶದ ಬಗ್ಗೆ

ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-

81 (86) ಮಾನ್ಯ ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಾಸನ ಜಿಲ್ಲೆಯಲ್ಲಿರುವ ಸಾಮಾಜಿಕ ಅರಣ್ಯ ಪ್ರದೇಶದ ವಿಸ್ತೀರ್ಣವೆಷ್ಟು; ಕಳೆದ 3 ವರ್ಷಗಳಲ್ಲಿ ಈ ಪ್ರದೇಶದಲ್ಲಿ ನೆಡಲಾದ ಸಸಿಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಬದುಕುಳಿದಿರುವ ಸಸಿಗಳೆಷ್ಟು; ಈ ಸಸಿಗಳನ್ನು ನೆಡಲು ಮತ್ತು ಇವುಗಳನ್ನು ಸಂರಕ್ಷಿಸಲು ತಗುಲಿರುವ ವೆಚ್ಚವೆಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಸಾಮಾಜಿಕ ಅರಣ್ಯ ವಿಭಾಗದಿಂದ ನೆಡಲಾದ ಸಸಿಗಳನ್ನು ಪೋಷಿಸಲು ಮತ್ತು ಸಂರಕ್ಷಿಸಿ ಮರಗಳನ್ನಾಗಿ ಬೆಳೆಸಲು ಇಲಾಖೆಯು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸಾಮಾಜಿಕ ಅರಣ್ಯ ವಿಭಾಗದಿಂದ ನೆಡಲಾದ ಸಸಿಗಳನ್ನು ಪೋಷಿಸಲು ಮತ್ತು ಸಂರಕ್ಷಿಸಲು ಇಲಾಖೆಯು ಯಾವ ರೀತಿ ಕ್ರಮ ವಹಿಸಲಾಗುತ್ತಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಹಾಸನ ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ಪ್ರದೇಶದಲ್ಲಿ ಸಸಿಗಳನ್ನು ಬೆಳೆಸಲು ಸ್ಥಾಪಿಸಲಾಗಿರುವ ನರ್ಸರಿಗಳ ಸಂಖ್ಯೆ ಎಷ್ಟು; ಕಳೆದ 5 ವರ್ಷಗಳಲ್ಲಿ ಈ ನರ್ಸರಿಗಳಲ್ಲಿ ಬೆಳೆಸಿದ ಸಸಿಗಳೆಷ್ಟು; ಇದಕ್ಕಾಗಿ ತಗುಲಿರುವ ವೆಚ್ಚವೆಷ್ಟು ? (ನರ್ಸರಿವಾರು ಮಾಹಿತಿ ನೀಡುವುದು)